**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು**

ವಿಷಯದ ಸಂಖ್ಯೆ:237/08-09

ವಿಂಡ್ಸರ್ ಮ್ಯಾನರ್‌ನಲ್ಲಿ ನಿರ್ಮಿಸಿರುವ ಅಂಡರ್ ಪಾಸ್ ರಸ್ತೆಗೆ ಮಾರ್ಗಸೂಚಿ ಹಾಗೂ ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡುಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ.

ಪ್ರಸ್ತಾವನೆ:

ವಿಂಡ್ಸರ್ ಮ್ಯಾನರ್‌ನಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಲಘು ವಾಹನ ಸಂಚಾರಕ್ಕೆ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ. ಈ ಸುರಂಗ ಮಾರ್ಗದ ರಸ್ತೆಗಳಿಗೆ ಡಾಂಬರೀಕರಣ ಮಾಡಿದ್ದು, ಸಂಚಾರಕ್ಕಾಗಿ ಮಾರ್ಗಸೂಚಿಗಳನ್ನು ಹಾಗೂ ವಾಹನ ಸಂಚಾರಕ್ಕೆ ಅನುಕೂಲವಾಗಲೆಂದು ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ಮಾರ್ಗದರ್ಶನ ನೀಡಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.1,97,800.00 ಗಳಿಗೆ ತಯಾರಿಸಲಾಗಿದ್ದು, ಈ ವೆಚ್ಚವನ್ನು ಇದೇ ಸುರಂಗ ಮಾರ್ಗ ನಿರ್ಮಿಸಲು ತಯಾರಿಸಿರುವ ರೂ.57.00 ಲಕ್ಷಗಳ ಮೂಲ ಅಂದಾಜು ಪಟ್ಟಿಯಲ್ಲಿ ಇತರ ಕಾಮಗಾರಿಗಳಿಗೆ ನಿಗಧಿ ಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದ್ದು, ಮೂಲ ಕಾಮಗಾರಿಗೆ ಈಗಾಗಲೇ ನೀಡಿರುವ ಕಾಮಗಾರಿ ಸಂಕೇತವನ್ನು ರಸ್ತೆ ಸ್ಟಡ್‌ಗಳಿಗೆ ತಯಾರಿಸಿರುವ ಅಂದಾಜು ಪಟ್ಟಿಗೆ ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗುವುದು. ಅಂದಾಜು ಪಟ್ಟಿಯಲ್ಲಿ ಅನುಮೋದನೆ ದರಗಳನ್ನು ಅಳವಡಿಸಿಕೊಳ್ಳಲಾಗಿದೆ ಹಾಗೂ M/s TATA BP SOLAR India Limited ರವರಿಂದ ತಯಾರಿಸಿರುವ ರಸ್ತೆ ಸ್ಟಡ್‌ಗಳನ್ನು ಅಳವಡಿಸಲು ಉದ್ದೇಶಿಸಿಲಾಗಿದೆ. ಈ ರಸ್ತೆ ಸ್ಟಡ್‌ಗಳನ್ನು M/s TATA BP SOLAR India Limited ರವರ ನಿಗಧಿಪಡಿಸಿರುವ ಸರಕುದಾರರಾದ M/s LSS Renewable Energy Company ರವರಿಂದ ನಿರ್ವಹಿಸಲು ಉದ್ದೇಶಿಸಿದೆ.

ಈ ಅಂಶಗಳ ಹಿನ್ನಲೆಯಲ್ಲಿ ವಿಂಡ್ಸರ್ ಮ್ಯಾನರ್‌ನಲ್ಲಿ ನಿರ್ಮಿಸಿರುವ ಸುರಂಗ ಮಾರ್ಗದ ರಸ್ತೆಗಳಿಗೆ ರಸ್ತೆ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ M/s LSS Renewable Energy Company ರವರಿಂದ ನಿರ್ವಹಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು

ವಿಷಯದ ಸಂಖ್ಯೆ:237/08-09

ವಿಂಡ್ಸರ್ ಮ್ಯಾನರ್‌ನಲ್ಲಿ ನಿರ್ಮಿಸಿರುವ ಅಂಡರ್ ಪಾಸ್ ರಸ್ತೆಗೆ ಮಾರ್ಗಸೂಚಿ ಹಾಗೂ ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡುಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ.

ಪ್ರಸ್ತಾವನೆ:

ವಿಂಡ್ಸರ್ ಮ್ಯಾನರ್‌ನಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಲಘು ವಾಹನ ಸಂಚಾರಕ್ಕೆ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ. ಈ ಸುರಂಗ ಮಾರ್ಗದ ರಸ್ತೆಗಳಿಗೆ ಡಾಂಬರೀಕರಣ ಮಾಡಿದ್ದು, ಸಂಚಾರಕ್ಕಾಗಿ ಮಾರ್ಗಸೂಚಿಗಳನ್ನು ಹಾಗೂ ವಾಹನ ಸಂಚಾರಕ್ಕೆ ಅನುಕೂಲವಾಗಲೆಂದು ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ಮಾರ್ಗದರ್ಶನ ನೀಡಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.1,97,800.00 ಗಳಿಗೆ ತಯಾರಿಸಲಾಗಿದ್ದು, ಈ ವೆಚ್ಚವನ್ನು ಇದೇ ಸುರಂಗ ಮಾರ್ಗ ನಿರ್ಮಿಸಲು ತಯಾರಿಸಿರುವ ರೂ.57.00 ಲಕ್ಷಗಳ ಮೂಲ ಅಂದಾಜು ಪಟ್ಟಿಯಲ್ಲಿ ಇತರ ಕಾಮಗಾರಿಗಳಿಗೆ ನಿಗಧಿ ಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದ್ದು, ಮೂಲ ಕಾಮಗಾರಿಗೆ ಈಗಾಗಲೇ ನೀಡಿರುವ ಕಾಮಗಾರಿ ಸಂಕೇತವನ್ನು ರಸ್ತೆ ಸ್ಟಡ್‌ಗಳಿಗೆ ತಯಾರಿಸಿರುವ ಅಂದಾಜು ಪಟ್ಟಿಗೆ ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗುವುದು. ಅಂದಾಜು ಪಟ್ಟಿಯಲ್ಲಿ ಅನುಮೋದನೆ ದರಗಳನ್ನು ಅಳವಡಿಸಿಕೊಳ್ಳಲಾಗಿದೆ ಹಾಗೂ M/s TATA BP SOLAR India Limited ರವರಿಂದ ತಯಾರಿಸಿರುವ ರಸ್ತೆ ಸ್ಟಡ್‌ಗಳನ್ನು ಅಳವಡಿಸಲು ಉದ್ದೇಶಿಸಿಲಾಗಿದೆ. ಈ ರಸ್ತೆ ಸ್ಟಡ್‌ಗಳನ್ನು M/s TATA BP SOLAR India Limited ರವರ ನಿಗಧಿಪಡಿಸಿರುವ ಸರಕುದಾರರಾದ M/s LSS Renewable Energy Company ರವರಿಂದ ನಿರ್ವಹಿಸಲು ಉದ್ದೇಶಿಸಿದೆ.

ಈ ಅಂಶಗಳ ಹಿನ್ನಲೆಯಲ್ಲಿ ವಿಂಡ್ಸರ್ ಮ್ಯಾನರ್‌ನಲ್ಲಿ ನಿರ್ಮಿಸಿರುವ ಸುರಂಗ ಮಾರ್ಗದ ರಸ್ತೆಗಳಿಗೆ ರಸ್ತೆ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ M/s LSS Renewable Energy Company ರವರಿಂದ ನಿರ್ವಹಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು**

**ವಿಷಯ ಸಂಖ್ಯೆ:238/2008–09**

ವಿಜಿನಾಪುರದಲ್ಲಿ ಓವರ್ ಹೆಡ್ ಟ್ಯಾಂಕಿನಿಂದ ಎಫ್.ಸಿ.ಐ. ರಸ್ತೆಯವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ವಿಜಿನಾಪುರದಲ್ಲಿ ಓವರ್ ಹೆಡ್ ಟ್ಯಾಂಕಿನಿಂದ ಎಫ್.ಸಿ.ಐ. ರಸ್ತೆಯವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಯನ್ನು ತಪಾಸಣೆ ಸಮಯದಲ್ಲಿ ಕೈಗೊಳ್ಳಲು ಆದೇಶಿಸಿರುವ ಮೇರೆಗೆ, ಮಹದೇವಪುರ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು 2007–08ನೇ ಸಾಲಿನ ಲೋಕೋಪಯೋಗಿ ಇಲಾಖೆ, ಬೆಂಗಳೂರು ವೃತ್ತದ ಎಸ್.ಆರ್. ದರಗಳ ಮೇಲೆ ರೂ.71.00 ಲಕ್ಷಗಳ ಅಂದಾಜುಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯ ವೆಚ್ಚವನ್ನು ವಿಶೇಷ ಅನುದಾನದ ಅಡಿಯಲ್ಲಿ ಭರಿಸಬಹುದಾಗಿದ್ದು, ಕಾಮಗಾರಿಗೆ ಸಂಕೇತವನ್ನು ಸಹ ಪಡೆಯಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಅಂದಾಜುಪಟ್ಟಿ ರೂ.71.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:07/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು

**ವಿಷಯ ಸಂಖ್ಯೆ:239/08-09**

ಗಂಗೇನಹಳ್ಳಿಯ ಸಿ.ಬಿ.ಐ. ಜಂಕ್ಷನ್ ಬಳಿ ಪಾದಚಾರಿ ಸುರಂಗಮಾರ್ಗ ನಿರ್ಮಿಸಿರುವ ಅಂಡರ್ ಪಾಸ್ ರಸ್ತೆಗೆ ಮಾರ್ಗಸೂಚಿ ಹಾಗೂ ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ.

**ಪ್ರಸ್ತಾವನೆ:**

ಗಂಗೇನಹಳ್ಳಿಯ ಸಿ.ಬಿ.ಐ. ಜಂಕ್ಷನ್ ಬಳಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಲಘು ವಾಹನ ಸಂಚಾರಕ್ಕೆ ಪಾದಚಾರಿ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ. ಈ ಸುರಂಗ ಮಾರ್ಗದ ರಸ್ತೆಗಳಿಗೆ ಡಾಂಬರೀಕರಣ ಮಾಡಿದ್ದು, ಸಂಚಾರಕ್ಕಾಗಿ ಮಾರ್ಗಸೂಚಿಗಳನ್ನು ಹಾಗೂ ವಾಹನ ಸಂಚಾರಕ್ಕೆ ಅನುಕೂಲವಾಗಲೆಂದು ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ಮಾರ್ಗದರ್ಶನ ನೀಡಿದಂತಾಗುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗೆ ರೂ.1,97,800.00 ಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಈ ವೆಚ್ಚವನ್ನು ಇದೇ ಸುರಂಗ ಮಾರ್ಗ ನಿರ್ಮಿಸಲು ತಯಾರಿಸಿರುವ ರೂ.49.95 ಲಕ್ಷಗಳ ಮೂಲ ಅಂದಾಜು ಪಟ್ಟಿಯಲ್ಲಿ ಇತರೆ ಕಾಮಗಾರಿಗಳಿಗೆ ನಿಗಧಿ ಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದ್ದು, ಹಾಗೂ ಮೂಲ ಕಾಮಗಾರಿಗೆ ಈಗಾಗಲೇ ನೀಡಿರುವ ಕಾಮಗಾರಿ ಸಂಕೇತವನ್ನು ರಸ್ತೆ ಸ್ಟಡ್‌ಗಳಿಗೆ ತಯಾರಿಸಿರುವ ಅಂದಾಜುಪಟ್ಟಿಗೆ ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗುವುದು. ಅಂದಾಜು ಪಟ್ಟಿಯಲ್ಲಿ ಅನುಮೋದಿತ ದರಗಳನ್ನು ಅಳವಡಿಸಿಕೊಳ್ಳಲಾದ್ದು, M/s.TATA BP SOLAR India Limited ರವರಿಂದ ತಯಾರಿಸಿರುವ ರಸ್ತೆ ಸ್ಟಡ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಈ ರಸ್ತೆ ಸ್ಟಡ್‌ಗಳನ್ನು M/s.TATA BP SOLAR India Limited ರವರು ನಿಗಧಿಪಡಿಸಿರುವ ಸರಕುದಾರರಾದ M/s.LSS Renewable Energy Company ರವರಿಂದ ನಿರ್ವಹಿಸಲು ಉದ್ದೇಶಿಸಿದೆ.

ಈ ಅಂಶಗಳ ಹಿನ್ನೆಲೆಯಲ್ಲಿ ಗಂಗೇನಹಳ್ಳಿಯ ಸಿ.ಬಿ.ಐ. ಜಂಕ್ಷನ್ ಬಳಿ ನಿರ್ಮಿಸಿರುವ ಪಾದಚಾರಿ ಸುರಂಗಮಾರ್ಗದ ರಸ್ತೆಗಳಿಗೆ ರಸ್ತೆ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ M/s.LSS Renewable Energy Company ರವರಿಂದ ನಿರ್ವಹಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು**

**ವಿಷಯ ಸಂಖ್ಯೆ:240/08-09**

ಸಂಜಯ್‌ನಗರದಲ್ಲಿ ನಿರ್ಮಿಸಿರುವ ಅಂಡರ್ ಪಾಸ್ ರಸ್ತೆಗೆ ಮಾರ್ಗಸೂಚಿ ಹಾಗೂ ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ.

**ಪ್ರಸ್ತಾವನೆ:**

ಸಂಜಯ್‌ನಗರದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಲಘು ವಾಹನ ಸಂಚಾರಕ್ಕೆ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ. ಈ ಸುರಂಗ ಮಾರ್ಗದ ರಸ್ತೆಗಳಿಗೆ ಡಾಂಬರೀಕರಣ ಮಾಡಿದ್ದು, ಸಂಚಾರಕ್ಕಾಗಿ ಮಾರ್ಗಸೂಚಿಗಳನ್ನು ಹಾಗೂ ವಾಹನ ಸಂಚಾರಕ್ಕೆ ಅನುಕೂಲವಾಗಲೆಂದು ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ಮರ್ಗದರ್ಶನ ನೀಡಿದಂತಾಗುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.1,66,500.00 ಗಳಿಗೆ ತಯಾರಿಸಲಾಗಿದ್ದು, ಈ ವೆಚ್ಚವನ್ನು ಇದೇ ಸುರಂಗ ಮಾರ್ಗ ನಿರ್ಮಿಸಲು ತಯಾರಿಸಿರುವ ರೂ.63.00 ಲಕ್ಷಗಳ ಮೂಲ ಅಂದಾಜು ಪಟ್ಟಿಯಲ್ಲಿ ಇತರೆ ಕಾಮಗಾರಿಗಳಿಗೆ ನಿಗಧಿ ಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದ್ದು, ಮೂಲ ಕಾಮಗಾರಿಗೆ ಈಗಾಗಲೇ ನೀಡಿರುವ ಕಾಮಗಾರಿ ಸಂಕೇತವನ್ನು ರಸ್ತೆ ಸ್ಟಡ್‌ಗಳಿಗೆ ತಯಾರಿಸಿರುವ ಅಂದಾಜುಪಟ್ಟಿಗೆ ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗುವುದು. ಅಂದಾಜು ಪಟ್ಟಿಯಲ್ಲಿ ಅನುಮೋದಿತ ದರಗಳನ್ನು ಅಳವಡಿಸಿಕೊಳ್ಳಲಾಗಿದ್ದು, M/s.TATA BP SOLAR India Limited ರವರಿಂದ ತಯಾರಿಸಿರುವ ರಸ್ತೆ ಸ್ಟಡ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಈ ರಸ್ತೆ ಸ್ಟಡ್‌ಗಳನ್ನು M/s.TATA BP SOLAR India Limited ರವರು ನಿಗದಿಪಡಿಸಿರುವ ಸರಕುದಾರರಾದ M/s.LSS Renewable Energy Company ರವರಿಂದ ನಿರ್ವಹಿಸಲು ಉದ್ದೇಶಿಸಿದೆ.

ಈ ಅಂಶಗಳ ಹಿನ್ನಲೆಯಲ್ಲಿ ಸಂಜಯ್‌ನಗರದಲ್ಲಿ ನಿರ್ಮಿಸಿರುವ ಸುರಂಗಮಾರ್ಗದ ರಸ್ತೆಗಳಿಗೆ ರಸ್ತೆ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ M/s.LSS Renewable Energy Company ರವರಿಂದ ನಿರ್ವಹಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು

**ವಿಷಯ ಸಂಖ್ಯೆ:241/08-09**

ಬಿ.ಡಿ.ಎ. ಜಂಕ್ಷನ್ ಬಳಿ ನಿರ್ಮಿಸಿರುವ ಅಂಡರ್ ಪಾಸ್ ರಸ್ತೆಗೆ ಮಾರ್ಗಸೂಚಿ ಹಾಗೂ ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ.

**ಪ್ರಸ್ತಾವನೆ:**

ಬಿ.ಡಿ.ಎ. ಜಂಕ್ಷನ್ ಬಳಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಲಘು ವಾಹನ ಸಂಚಾರಕ್ಕೆ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ. ಈ ಸುರಂಗ ಮಾರ್ಗದ ರಸ್ತೆಗಳಿಗೆ ಡಾಂಬರೀಕರಣ ಮಾಡಿದ್ದು, ಸಂಚಾರಕ್ಕಾಗಿ ಮಾರ್ಗಸೂಚಿಗಳನ್ನು ಹಾಗೂ ವಾಹನ ಸಂಚಾರಕ್ಕೆ ಅನುಕೂಲವಾಗಲೆಂದು ರಸ್ತೆಗೆ ಸೌರಶಕ್ತಿಯ ಸ್ಟಡ್‌ಗಳನ್ನು ಅಳವಡಿಸುವುದು ಅವಶ್ಯಕವಾಗಿರುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ಮಾರ್ಗದರ್ಶನ ನೀಡಿದಂತಾಗುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.1,56,300.00 ಗಳಿಗೆ ತಯಾರಿಸಲಾಗಿದ್ದು, ಈ ವೆಚ್ಚವನ್ನು ಇದೇ ಸುರಂಗ ಮಾರ್ಗ ನಿರ್ಮಿಸಲು ತಯಾರಿಸಿರುವ ರೂ.44.00 ಲಕ್ಷಗಳ ಮೂಲ ಅಂದಾಜು ಪಟ್ಟಿಯಲ್ಲಿ ಇತರೆ ಕಾಮಗಾರಿಗಳಿಗೆ ನಿಗಧಿ ಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದ್ದು, ಮೂಲ ಕಾಮಗಾರಿಗೆ ಈಗಾಗಲೇ ನೀಡಿರುವ ಕಾಮಗಾರಿ ಸಂಕೇತವನ್ನು ರಸ್ತೆ ಸ್ಟಡ್‌ಗಳಿಗೆ ತಯಾರಿಸಿರುವ ಅಂದಾಜುಪಟ್ಟಿಗೆ ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗುವುದು. ಅಂದಾಜು ಪಟ್ಟಿಯಲ್ಲಿ ಅನುಮೋದಿತ ದರಗಳನ್ನು ಅಳವಡಿಸಿಕೊಳ್ಳಲಾಗಿದ್ದು, M/s.TATA BP SOLAR India Limited ರವರಿಂದ ತಯಾರಿಸಿರುವ ರಸ್ತೆ ಸ್ಟಡ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಈ ರಸ್ತೆ ಸ್ಟಡ್‌ಗಳನ್ನು M/s.TATA BP SOLAR India Limited ರವರು ನಿಗಧಿಪಡಿಸಿರುವ ಸರಕುದಾರರಾದ M/s.LSS Renewable Energy Company ರವರಿಂದ ನಿರ್ವಹಿಸಲು ಉದ್ದೇಶಿಸಿದೆ.

ಈ ಅಂಶಗಳ ಹಿನ್ನಲೆಯಲ್ಲಿ ಬಿ.ಡಿ.ಎ. ಜಂಕ್ಷನ್ ಬಳಿ ನಿರ್ಮಿಸಿರುವ ಸುರಂಗಮಾರ್ಗದ ರಸ್ತೆಗಳಿಗೆ ರಸ್ತೆ ಸ್ಟಡ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ತುಂಡು ಗುತ್ತಿಗೆಯ ಆಧಾರದ ಮೇಲೆ M/s.LSS Renewable Energy Company ರವರಿಂದ ನಿರ್ವಹಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:07/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಪಟ್ಟಣಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 18/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:242/2008-09**

ಡಿಸ್ಪೆನ್ಸರಿ ರಸ್ತೆಯಲ್ಲಿರುವ ಮಹಾನಗರ ಪಾಲಿಕೆ ಅಂಗಡಿಯ ಮೇಲೆ ವಿದ್ಯುತ್ ಚಾಲಿತ ಜಾಹೀರಾತು ಫಲಕ ಅಳವಡಿಸಲು ಅನುಮತಿ ನೀಡುವ ಬಗ್ಗೆ.

**ಪ್ರಸ್ತಾವನೆ:**

ಶ್ರೀ.ವಿ.ಕಣ್ಣಾಪೀರನ್, ನಂ:78, ಡಿಸ್ಪೆನ್ಸರಿ ರಸ್ತೆ, ಬೆಂಗಳೂರು, ಇವರಿಗೆ ಡಿಸ್ಪೆನ್ಸರಿ ರಸ್ತೆಯಲ್ಲಿರುವ ಮಹಾನಗರ ಪಾಲಿಕೆ ಅಂಗಡಿಯ ಮೇಲೆ 2x16 ಅಡಿ ಅಳತೆಯ ವಿದ್ಯುತ್ ಚಾಲಿತ ಜಾಹೀರಾತು ಫಲಕ ಅಳವಡಿಸಲು ದಿನಾಂಕ:01/11/2001 ರಿಂದ 31/10/2004 ರವರೆಗೆ ವಿಷಯದ ಸಂಖ್ಯೆ:ಕೆ.ಆ.121/01-02 ದಿನಾಂಕ:11/02/2002 ರಂದು 3 ವರ್ಷಗಳಿಗೆ ಅನುಮತಿ ನೀಡಲಾಗಿರುತ್ತದೆ. ಮುಂದುವರೆದಂತೆ, ದಿನಾಂಕ:01/112004 ರಿಂದ ದಿನಾಂಕ:31/10/2005 ರವರೆಗೆ ಮಾನ್ಯ ವಿಶೇಷ ಆಯುಕ್ತರವರ ಆದೇಶದಂತೆ ಅನುಮತಿ ನೀಡಲಾಗಿದೆ. ಸದರಿ ಜಾಹೀರಾತುದಾರರು ಪುನ: ಅನುಮತಿಯ ಅವಧಿಯನ್ನು 6 ವರ್ಷಗಳ ಅವಧಿಗೆ ನವೀಕರಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ. ವಿದ್ಯುತ್ ಚಾಲಿತ ಜಾಹೀರಾತು ಫಲಕದ ರೀ ಲೈಸೆನ್ಸ್ ಫೀ ಹಾಗೂ ಜಾಹೀರಾತು ತೆರಿಗೆಯನ್ನು ದಿನಾಂಕ:31/10/2006 ರವರೆಗೆ ಪಾವತಿಸಿಕೊಳ್ಳಲಾಗಿರುತ್ತದೆ.

ಜಾಹೀರಾತು ಫಲಕವು 2006 ರ ಬೈಲಾಗನುಗುಣವಾಗಿ ಜಾಹೀರಾತುದಾರರು ಅಂಗವಿಕಲರಾಗಿದ್ದು, ಸದರಿ ಫಲಕಕ್ಕೆ ತಿಂಗಳಿಗೆ ರೂ700/- ಗಳ ನೆಲಬಾಡಿಗೆ ಮತ್ತು ತಿಂಗಳಿಗೆ ಚದರ ಮೀಟರ್‌ಗೆ ರೂ.150/- ಗಳಂತೆ ಜಾಹೀರಾತು ತೆರಿಗೆ ಮತ್ತು ಶೇಕಡ 15% ಆರೋಗ್ಯಕರ ರೀತ್ಯಾ ತೆರಿಗೆ ಪಾವತಿಸುವ ಷರತ್ತಿಗೊಳಪಡಿಸಿ ದಿನಾಂಕ:01/11/2005 ರಿಂದ 31/10/2010 ರವರೆಗೆ (ಘಟನೋತ್ತರ ಅವಧಿಯೂ ಸೇರಿದಂತೆ) 5 ವರ್ಷಗಳಿಗೆ ಅನುಮತಿ ನೀಡಬಹುದಾಗಿದ್ದು, ಅನುಮೋದನೆಗಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:10/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ತೆರಿಗೆ ಮತ್ತು ಆರ್ಥಿಕ ಸ್ಥಾ.ಸ. ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:18/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:243/2008-09**

ಕರ್ನಾಟಕ ಸ್ಟೇಟ್ ಅಮೆಚೂರ್ ನೆಟ್‌ಬಾಲ್ ಅಸೋಸಿಯೇಷನ್ ರವರಿಗೆ ಅನುದಾನ/ಸಹಾಯಧನ ಮಂಜೂರು ಮಾಡುವ ಬಗ್ಗೆ.

**ಪ್ರಸ್ತಾವನೆ:**

ಕರ್ನಾಟಕ ಸ್ಟೇಟ್ ಅಮೆಚೂರ್ ನೆಟ್‌ಬಾಲ್ ಅಸೋಸಿಯೇಷನ್ (ರಿ). ರಾಜಾಜಿನಗರ, ಬೆಂಗಳೂರು, ಸಂಸ್ಥೆಯವರು ಅರ್ಜಿ ಮತ್ತು ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆ ವತಿಯಿಂದ ಹಲವಾರು ಜಿಲ್ಲಾ, ರಾಜ್ಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳನ್ನು ಆಯೋಜಿಸಿದ್ದು, ಅದರಲ್ಲಿ ವಿಶೇಷವಾಗಿ 5ನೇ ಏಷ್ಯಾ ಯುವ ಮಹಿಳಾ ನೆಟ್‌ಬಾಲ್ ಪಂದ್ಯಾವಳಿಗಳು ಅತ್ಯಂತ ಜನಪ್ರಿಯ ಹಾಗೂ ಜನಮನ್ನಣೆ ಪಡೆದಂತಹ ಪಂದ್ಯಾವಳಿಯಾಗಿದ್ದು, ಇದರಲ್ಲಿ ಭಾರತ ತಂಡ 3ನೇ ಸ್ಥಾನ ಪಡೆದಿರುತ್ತದೆ. ತಮ್ಮ ಸಂಸ್ಥೆಯ ವತಿಯಿಂದ ಆಯೋಜಿಸಲ್ಪಟ್ಟಿದ್ದ 5ನೇ ಏಷ್ಯಾ ಯುವ ಮಹಿಳಾ ನೆಟ್‌ಬಾಲ್ ಪಂದ್ಯಾವಳಿಗೆ ಪಾಲಿಕೆ ವತಿಯಿಂದ ರೂ.2.00 ಲಕ್ಷಗಳ ಸಹಾಯಧನವನ್ನು ನೀಡಲಾಗಿರುತ್ತದೆಂದು, ತಮ್ಮ ಸಂಸ್ಥೆಯು ಪಂದ್ಯಾವಳಿಗಳನ್ನು ಆಯೋಜಿಸುವುದಷ್ಟೆ ಅಲ್ಲದೇ ರಾಷ್ಟ್ರಕ್ಕೆ ಕೀರ್ತಿ ತರುವಂತಹ ಕ್ರೀಡಾಪಟುಗಳನ್ನು ತರಬೇತುಗೊಳಿಸುವಂತಹ ಗುರುತರವಾದ ಜವಾಬ್ದಾರಿಯುತ ಕಾರ್ಯವನ್ನು ಮಾಡುತ್ತಾ ನೆಟ್‌ಬಾಲ್ ಕ್ರೀಡೆಯನ್ನು ಮತ್ತಷ್ಟು ಹಾಗು ಜನಪ್ರಿಯ ಕ್ರೀಡೆಯನ್ನಾಗಿಸಲು ಶ್ರಮಿಸುತ್ತಿದೆಂದು, ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಗಮನಿಸಿ, 2007-08ನೇ ಸಾಲಿಗೆ ರೂ.5.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಮಾನ್ಯ ಆಡಳಿತಗಾರರವರ ಗಮನಕ್ಕೆ ತರುತ್ತಾ ಪ್ರಸ್ತಾವಿತ ಸಂಸ್ಥೆಯ ಮಾಡುತ್ತಿರುವ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2008-09 ನೇ ಸಾಲಿನ ಆಯವ್ಯಯದ ಲೆಕ್ಕ ಶಿರ್ಷಿಕೆ 24, ಸಂಸ್ಕೃತಿ ಮತ್ತು ಕ್ರೀಡೆ, ಕೊಡುಗೆ ಮತ್ತು ಸಹಾಯ ಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಿರುವ ರೂ.300.00 ಲಕ್ಷಗಳ ಅನುದಾನದಲ್ಲಿ, ರೂ.50,000=00 ಗಳ ಅನುದಾನವನ್ನು ಪ್ರಸ್ತಾವಿತ ಸಂಸ್ಥೆಗೆ 2008-09ನೇ ಸಾಲಿಗೆ ಮಂಜೂರು ಮಾಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:02/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:19/06/2008 ರ ನಡವಳಿಗಳು

ವಿಷಯದ ಸಂಖ್ಯೆ:120/2008–09

Providing and laying 600mm dia S & S type RCC Pipe line along Vrishabhavathi Valley from Nagarabhavi 2nd Stage, Vinayakanagara to Teachers Colony ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Providing and laying 600mm dia S & S type RCC Pipe line along Vrishabhavathi Valley from Nagarabhavi 2nd Stage, Vinayakanagara to Teachers Colony ರ ಕಾಮಗಾರಿಯನ್ನು ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ವೃಷಭಾವತಿ ಕಣಿವೆ, ಪ್ಯಾಕೇಜ್ – 4 ರ ಅಡಿಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ರೂ.78.00 ಲಕ್ಷಗಳ ಅಂದಾಜು ಪಟ್ಟಿಗೆ ಕಾರ್ಯಪಾಲಕ ಅಭಿಯಂತರರು (ವೃಷಭಾವತಿ ಕಣಿವೆ) ರವರು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್‌ಗಳನ್ನು ಪರಿಶೀಲಿಸಲಾಗಿ, ತಾಂತ್ರಿಕ ಬಿಡ್‌ನಲ್ಲಿ ಸದರಿ ಗುತ್ತಿಗೆದಾರರು ಅರ್ಹರಾಗಿದ್ದು, ಇವರ ಆರ್ಥಿಕ ಬಿಡ್‌ಗಳ ಅನ್ನು ತೆರೆಯಲಾಗಿ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ.ಗಳಲ್ಲಿ) |
|---|---|---|---|---|
| 1 | ಚಿಕ್ಕ ಹೊಂಬಯ್ಯ | 78.00 | 74,18,936.00 | 19.72% ರಷ್ಟು ಹೆಚ್ಚು (ರೂ. 88,81,728.80) |

ಕನಿಷ್ಠ ಗುತ್ತಿಗೆದಾರರಾದ ಶ್ರೀ.ಚಿಕ್ಕಹೊಂಬಯ್ಯ ರವರು ನಮೂದಿಸಿರುವ ದರವಾದ ರೂ.88,81,728.80 ಗಳನ್ನು 2007–08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ19.72% ಹೆಚ್ಚಿರುತ್ತದೆ. ಸದರಿ ಗುತ್ತಿಗೆದಾರರನ್ನು ಸಂಧಾನಕ್ಕೆ ಆಹ್ವಾನಿಸಲಾಗಿ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಶೇ.14.50 (ರೂ.84,94,681.72) ಹೆಚ್ಚುವರಿಗೆ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ. ಈ ಹಿನ್ನೆಲೆಯಲ್ಲಿ ಟೆಂಡರ್, ಅಂದಾಜು ಪಟ್ಟಿಯ ಆಡಳಿತಾತ್ಮಕ ಅನುಮೋದನೆ ಹಾಗೂ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.84,94,681.72 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:19/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:129/2008-09**

Providing and laying 600mm dia S & S type RCC Pipe line along Vrishabhavathi Valley from Jnana Bharathi (Ph.D.Hostel) to Gandhi Bhavan Road ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Providing and laying 600mm dia S & S type RCC Pipe line along Vrishabhavathi Valley from Jnana Bharathi (Ph.D.Hostel) to Gandhi Bhavan Road ರ ಕಾಮಗಾರಿಯನ್ನು ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ವೃಷಭಾವತಿ ಕಣಿವೆ, ಪ್ಯಾಕೇಜ್ – 4 ರ ಅಡಿಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ರೂ.60.00 ಲಕ್ಷಗಳ ಅಂದಾಜು ಪಟ್ಟಿಗೆ ಕಾರ್ಯಪಾಲಕ ಅಭಿಯಂತರರು (ವೃಷಭಾವತಿ ಕಣಿವೆ) ರವರು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್ಡ್‌ಗಳನ್ನು ಪರಿಶೀಲಿಸಲಾಗಿ, ತಾಂತ್ರಿಕ ಬಿಡ್‌ನಲ್ಲಿ ಸದರಿ ಗುತ್ತಿಗೆದಾರರು ಅರ್ಹರಾಗಿದ್ದು, ಇವರ ಆರ್ಥಿಕ ಬಿಡ್‌ಗಳ ಅನ್ನು ತೆರೆಯಲಾಗಿ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ ಸಂ. | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ.ಗಳಲ್ಲಿ) |
|---|---|---|---|---|
| 1 | ಚಿಕ್ಕ ಹೊಂಬಯ್ಯ | 60.00 | 57,65,876.00 | 19.58% ರಷ್ಟು ಹೆಚ್ಚು (ರೂ. 68,94,641.50) |

ಕನಿಷ್ಟ ಗುತ್ತಿಗೆದಾರರಾದ ಶ್ರೀ. ಚಿಕ್ಕ ಹೊಂಬಯ್ಯ ರವರು ನಮೂದಿಸಿರುವ ದರವಾದ ರೂ.68,94,641.50 ಗಳನ್ನು 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ19.58% ಹೆಚ್ಚಿರುತ್ತದೆ. ಸದರಿ ಗುತ್ತಿಗೆದಾರರನ್ನು ಸಂಧಾನಕ್ಕೆ ಆಹ್ವಾನಿಸಲಾಗಿ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಶೇ.14.50 (ರೂ.66,01,928.02) ಹೆಚ್ಚುವರಿಗೆ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ. ಈ ಹಿನ್ನೆಲೆಯಲ್ಲಿ ಟೆಂಡರ್, ಅಂದಾಜು ಪಟ್ಟಿಯ ಆಡಳಿತಾತ್ಮಕ ಅನುಮೋದನೆ ಹಾಗೂ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ. 66,01,928.02 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:13/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:19/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:234/2008–09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:9, 4ನೇ ಮುಖ್ಯ ರಸ್ತೆ, ಗಾಯಿತ್ರಿನಗರ, ನಗರ ಪಾಲಿಕೆ ವ್ಯಾಯಾಮ ಶಾಲೆ ಪಕ್ಕದಲ್ಲಿರುವ ನಗರಪಾಲಿಕೆ ವಸತಿ ಗೃಹವನ್ನು ಶ್ರೀ.ರುದ್ರಪ್ಪ, ಟೈಪ್‌ರೈಟರ್ ಮೆಕಾನಿಕ್ ರವರು ಕ್ರಯಕ್ಕೆ ನೀಡಲು ಕೋರಿರುವ ಬಗ್ಗೆ.

**ಪ್ರಸ್ತಾವನೆ:**

ಶ್ರೀ. ರುದ್ರಪ್ಪ, ಟೈಪ್‌ರೈಟರ್ ಮೆಕಾನಿಕ್ ಆಗಿ ಕಂದಾಯ ಅಧಿಕಾರಿ (ದಸ್ತಾವೇಜು ಮತ್ತು ಉಗ್ರಾಣ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರಿಗೆ 4ನೇ ಮುಖ್ಯರಸ್ತೆ, ಗಾಯಿತ್ರಿನಗರ, ನಗರ ಪಾಲಿಕೆಯ ವ್ಯಾಯಾಮಶಾಲೆ ಪಕ್ಕದಲ್ಲಿರುವ ನಗರಪಾಲಿಕೆ ವಸತಿ ಗೃಹವನ್ನು 1984ರ ಸಾಲಿನಲ್ಲಿ ಹಂಚಿಕೆಯಾಗಿದ್ದು, ಸದರಿ ವಸತಿಗೃಹದಲ್ಲಿ ಸುಮಾರು 16–ವರ್ಷಗಳಿಂದ ವಾಸವಾಗಿರುವ ಕಾರಣ ಸದರಿಯವರ ವೇತನದಲ್ಲಿ ಮನೆ ಬಾಡಿಗೆಯನ್ನು ಕಟಾವು ಮಾಡಲಾಗುತ್ತಿದೆ ಎಂದು ತಿಳಿಸಿ ಸರ್ಕಾರದ ಆದೇಶ ಸಂಖ್ಯೆ:ನಅಇ/245/ಎಂಎನ್‌ಜಿ/2001, ದಿನಾಂಕ:02/02/2002ರಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ವಸತಿಗೃಹಗಳಲ್ಲಿ ವಾಸವಾಗಿರುವವರಿಗೆ ಕ್ರಯಕ್ಕೆ ನೀಡಲಾಗಿದ್ದು, ಅದರಂತೆ ತಮ್ಮಗೂ ಸಹ ವಸತಿ ಗೃಹವನ್ನು ಕ್ರಯಕ್ಕೆ ನೀಡಲು ಕೋರಿರುತ್ತಾರೆ.

ಆದರೆ, ದಿನಾಂಕ:11/12/2003ರ ಉಪ ಆಯುಕ್ತರು (ಕಂದಾಯ)ರವರ ಆದೇಶದ ಮೇರೆಗೆ, ವಸತಿ ಗೃಹಗಳನ್ನು ವಿಲೇವಾರಿ ಮಾಡಲು ಅವಕಾಶವಿರುವುದಿಲ್ಲ ಎಂಬುದಾಗಿ ಹಿಂಬರಹವನ್ನು ನೀಡಲಾಗಿದ್ದರೂ ಅರ್ಜಿದಾರರು ಪುನಃ ಅರ್ಜಿ ಸಲ್ಲಿಸಿ, ನಗರ ಪಾಲಿಕೆಯ ಹಲವಾರು ನೌಕರರಿಗೆ ಈಗಾಗಲೇ ಒಂಟಿ ನಿವೇಶನ (ವಸತಿಗೃಹಗಳನ್ನು) ಕ್ರಯಕ್ಕೆ ನೀಡಿರುವಂತೆ ಹಾಗೂ ಅಂಗವಿಕಲ ಹೆಣ್ಣು ಮಗಳ ಭವಿಷ್ಯದ ದೃಷ್ಟಿಯಿಂದ ಮತ್ತು ಸದರಿ ಪ್ರದೇಶದಲ್ಲಿ ಇದು ಒಂಟಿ ಮನೆ ಇರುವುದರಿಂದ ನನಗೂ ಅದೇ ರೀತಿ ನೀಡಬೇಕೆಂದು ಕೋರಿರುತ್ತಾರೆ.

ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಅಧ್ಯಕ್ಷರು ಸದರಿ ಪ್ರಸ್ತಾವನೆಯೊಂದಿಗೆ ಟಿಪ್ಪಣಿಯನ್ನು ಮಂಡಿಸಲು ಕೋರಿರುವ ಮೇರೆಗೆ ಸ್ಥಾಯಿ ಸಮಿತಿಗಳ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಟಿಪ್ಪಣಿ ಮಂಡಿಸಲಾಗಿರುತ್ತದೆ.

ಈ ಬಗ್ಗೆ ದಿನಾಂಕ:11/07/2005ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ಸರ್ಕಾರದ ಮಾರ್ಗಸೂಚಿಗಳ ಅನ್ವಯ ಸದರಿ ಪ್ರಕರಣದಲ್ಲಿನ ವಸತಿ ಗೃಹವನ್ನು ಕ್ರಯಕ್ಕೆ ನೀಡುವುದೆಂದು ತೀರ್ಮಾನಿಸಿದೆ ಮತ್ತು ದಿನಾಂಕ:25/07/2005ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11/07/2005ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಿದೆ.

. . . 2

ಈ ಮಧ್ಯೆ ವಾರ್ಡ್ ಸಂಖ್ಯೆ:13 ಮತ್ತು 56ರ ನಗರಪಾಲಿಕೆ ಸದಸ್ಯರು ದಿನಾಂಕ:12/09/2005 ರಂದು ಪೂಜ್ಯ ಮಹಾಪೌರರಿಗೆ ಮನವಿ ಪತ್ರ ಸಲ್ಲಿಸಿ, ಕೆ.ಎಂ.ಸಿ.ಕಾಯ್ದೆ ಮೇರೆಗೆ ರೂಲ್–51 ರಂತೆ ಶ್ರೀ.ರುದ್ರಪ್ಪ ಟೈಪ್‌ರೈಟರ್ ಮೆಕಾನಿಕ್‌ರವರಿಗೆ ವಾರ್ಡ್ ಸಂಖ್ಯೆ:09ರ ಸುಬ್ರಮಣ್ಯ ನಗರದಲ್ಲಿರುವ ನಗರಪಾಲಿಕೆಯ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಬಗ್ಗೆ ವಿಷಯವನ್ನು ಪುನರ್ ಪರಿಶೀಲನೆಗೆ ನಗರಪಾಲಿಕೆ ಸಭೆ ಮುಂದೆ ಮಂಡಿಸಲು ಕೋರಿರುತ್ತಾರೆ. ಆದ್ದರಿಂದ ಸದರಿ ಕಡತವನ್ನು ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ:29/01/2007 ರಂದು ಮಾನ್ಯ ಆಡಳಿತಗಾರರು "ಆಯುಕ್ತರವರ ದಿನಾಂಕ:12/01/2007 ರ ಟಿಪ್ಪಣಿಯನ್ನು ಒಪ್ಪಿರುತ್ತಾರೆ.

ತತ್ಸಂಬಂಧ ಆಡಳಿತಾಧಿಕಾರಿಗಳ ಒಪ್ಪಿಗೆಯನ್ನು ಸರ್ಕಾರಕ್ಕೆ ಕಲಂ–176 ಮತ್ತು 182 ಪ್ರಕಾರ ಅನುಮತಿಗಾಗಿ ಸಲ್ಲಿಸಬೇಕಾಗಿದ್ದು, ಆದರೆ, ಸರ್ಕಾರಕ್ಕೆ ಶಿಫಾರಸ್ಸು ಮಾಡದಿರುವ ಕಾರಣ ಪುನಃ ಶ್ರೀ. ರುದ್ರಪ್ಪನವರು ಮಾನ್ಯ ಆಡಳಿತಗಾರರಿಗೆ ಮನವಿಯನ್ನು ದಿನಾಂಕ:13/03/2008 ರಂದು ಸಲ್ಲಿಸಿರುತ್ತಾರೆ. ಮಾನ್ಯ ಆಡಳಿತಗಾರರು ಸದರಿ ಮನವಿಯ ಮೇಲೆ "Why they were not entitled this benefit to any other employees" ಎಂದು ಸೂಚಿಸಿರುತ್ತಾರೆ. ಅಂದರೆ ಮಾನ್ಯ ಆಡಳಿತಗಾರರು ಇಂತಹ ಸಣ್ಣ ನೌಕರರಿಗೆ ಅನುಕೂಲ ಒದಗಿಸುವ ಸದುದ್ದೇಶವಿದೆ ಎಂದು ಸರ್ಕಾರಕ್ಕೆ ಕಳುಹಿಸುವುದಕ್ಕೆ ಮುಂಚೆ ಆಡಳಿತಗಾರರ ವಿಷಯದ ಸಂಖ್ಯೆ:526/07–08 ರ ನಿರ್ಣಯದಲ್ಲಿ ಯಾವುದೇ ತೀರ್ಮಾನವಾಗದೆ ಪರಿಶೀಲಿಸಿ ಪುನಃ ಮಂಡಿಸಲು ಆದೇಶಿಸಿರುವ ಮೇರೆಗೆ ಶ್ರೀ.ವೆಂಕಟೇಶ್, ಕಂದಾಯ ಪರಿವೀಕ್ಷಕರು, ಶ್ರೀ.ಬಸಪ್ಪ, ಕಂದಾಯ ವಸೂಲಿಗಾರರು, ಶ್ರೀ.ಸದಾಶಿವ, 4ನೇ ದರ್ಜೆ ನೌಕರರಿಗೆ, ಶ್ರೀ.ಮುನಿವೆಂಕಟಪ್ಪ, ಸಹಾಯಕ ಶಿಕ್ಷಕರಿಗೆ ಹಾಗೂ ಶ್ರೀ.ಎಂ.ಡಿ.ಶಿವಶಂಕರ್, ವಿದ್ಯುತ್ ವಾಹನ ಚಾಲಕರಿಗೆ ವಸತಿ ಗೃಹಗಳನ್ನು ಮಾರುಕಟ್ಟೆ ದರದ ಆಧಾರದ ಮೇಲೆ ಸ್ಥಾಯಿ ಸಮಿತಿಗಳು, ನಗರ ಪಾಲಿಕೆಯ ಹಾಗೂ ಸರ್ಕಾರದ ಅನುಮೋದನೆ ಮೇರೆಗೆ ಈಗಾಗಲೇ ಕ್ರಯಕ್ಕೆ ನೀಡಲಾಗಿರುತ್ತದೆ ಎಂಬ ಅಂಶವನ್ನು ಸಲ್ಲಿಸಿದೆ.

ಆದ್ದರಿಂದ, ಸದರಿ ಅರ್ಜಿದಾರರಾದ ಶ್ರೀ.ರುದ್ರಪ್ಪ ಎಂಬುವವರು ವಾಸಿಸುತ್ತಿರುವ ವಸತಿ ಗೃಹದ ವಿಸ್ತೀರ್ಣವು ?) x $\frac{27+26.9}{2}$ =161.7 ಗಳಾಗಿದ್ದು, ಸ್ವತ್ತಿನ ಪ್ರಸ್ತುತ ಮಾರುಕಟ್ಟೆ ದರವು ಚದರ ಅಡಿ ಒಂದಕ್ಕೆ ವಸತಿಗೆ ರೂ.2500.00 ರಂತೆ ಲೆಕ್ಕಾಚಾರ ಮಾಡಲಾಗಿ ಸ್ವತ್ತಿನ ಒಟ್ಟು ಮೌಲ್ಯವು ರೂ.4,04,250.00 ಗಳಾಗುತ್ತದೆ ಹಾಗೂ ಕಟ್ಟಡಕ್ಕೆ ಚದರ ಅಡಿ ಒಂದಕ್ಕೆ ರೂ.470.00 ಗಳಿದ್ದು, ಲೆಕ್ಕಾಚಾರ ಮಾಡಿದಾಗ ಒಟ್ಟು ಮೌಲ್ಯ ರೂ.75,999.00 ಗಳಾಗುತ್ತದೆ. ನಿವೇಶನ ಹಾಗೂ ಕಟ್ಟಡದ ಒಟ್ಟು ಮೌಲ್ಯ ಸೇರಿ ರೂ.4,80,249.00 ಗಳಾಗುತ್ತದೆ. ಸರ್ಕಾರದ ಮಾರ್ಗಸೂಚಿಯಂತೆ ಶೇ.20 ರಷ್ಟು ಹೆಚ್ಚುವರಿ ಮಾಡಿದಾಗ ರೂ.96,050.00 ಗಳಾಗಿದ್ದು, ಸ್ವತ್ತಿನ ಒಟ್ಟು ಮೌಲ್ಯ ರೂ.5,76,295.00 ಗಳಾಗುತ್ತದೆ. ಅಂತೂ ಒಬ್ಬ ಸಣ್ಣ ನೌಕರನಿಗೆ ಅವರ ಅಂಗವಿಕಲ ಹೆಣ್ಣು ಮಗಳ ಭವಿಷ್ಯದ ದೃಷ್ಟಿಯಿಂದ ಮತ್ತು ಈಗಾಗಲೇ ಇತರ ಮೂರು ಪ್ರಕರಣಗಳಲ್ಲಿ ಸರ್ಕಾರದ ಮಂಜೂರಾತಿ ಪಡೆದ ಹಾಗೂ ಮಾನ್ಯ ಆಡಳಿತಗಾರರ ಸೂಚನೆ ಮೇರೆಗೆ ಮರು ಮಂಡಿಸಿರುವ ಆಯುಕ್ತರವರ ದಿನಾಂಕ:06/06/2008 ರ ಟಿಪ್ಪಣಿ.

**ತೀರ್ಮಾನ:** Proposal approved. However, we shall not entertain any further request of this type without first formulating a general policy.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು

ವಿಷಯ ಸಂಖ್ಯೆ:133/2008-09

Providing and laying 600 mm dia S&S type RCC Pipe line along Vrishabhavathi Valley from, Nagarbhavi 2nd stage, Hoysala Nagar to NGEF Layout ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Providing and laying 600 mm dia S&S type RCC Pipe line along Vrishabhavathi Valley from, Nagarbhavi 2nd stage, Hoysala Nagar to NGEF Layout ಕಾಮಗಾರಿಯನ್ನು ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ವೃಷಭಾವತಿ ಕಣಿವೆ, ಪ್ಯಾಕೇಜ್-4 ರ ಅಡಿಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ರೂ.70.00 ಲಕ್ಷಗಳ ಅಂದಾಜುಪಟ್ಟಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಕಾರ್ಯಪಾಲಕ ಅಭಿಯಂತರರು (ವೃಷಭಾವತಿ ಕಣಿವೆ) ರವರು ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್‌ನ್ನು ಪರಿಶೀಲಿಸಲಾಗಿದ್ದು, ತಾಂತ್ರಿಕ ಬಿಡ್‌ನಲ್ಲಿ ಇಬ್ಬರು ಗುತ್ತಿಗೆದಾರರು ಅರ್ಹರಾಗಿದ್ದು, ಇವರುಗಳ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗಿಟ್ ಮೊತ್ತ ರೂ.ಗಳಲ್ಲಿ | ನಮೂದಿಸಿರುವ ಶೇಕಡವಾರು ಮೊತ್ತ (ರೂ. ಗಳಲ್ಲಿ) |
|---|---|---|---|---|
| 01 | ಎನ್.ಬಿ.ನಾಗರಾಜು | 70.00 | 65,95,794.00 | 40.87% ರಷ್ಟು ಹೆಚ್ಚು (ರೂ.92,91,197.50) |
| 02 | ಡಿ.ರವೀಂದ್ರ | 70.00 | 65,95,794.00 | 44.71% ರಷ್ಟು ಹೆಚ್ಚು (95,45,084.80) |

ಶ್ರೀ.ಎನ್.ಬಿ.ನಾಗರಾಜು, ಗುತ್ತಿಗೆದಾರರು ನಮೂದಿಸಿರುವ ದರಗಳ ಮೊತ್ತ ರೂ.92,91,197.50 ಗಳನ್ನು 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜುಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇಕಡ 40.87% ಹೆಚ್ಚಿರುತ್ತದೆ. ಸದರಿ ಗುತ್ತಿಗೆದಾರರನ್ನು ಸಂಧಾನಕ್ಕೆ ಆಹ್ವಾನಿಸಲಾಗಿ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಶೇಕಡ 19.98 (ರೂ.79,13,633.64) ಹೆಚ್ಚುವರಿಗೆ ನಿರ್ವಹಿಸಿರುವುದಾಗಿ ಒಪ್ಪಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ, ಟೆಂಡರ್ ಹಾಗೂ ಸಂಧಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.79,13,633.64 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:246/08-09**

ಲೋಕ್ ಅದಾಲತ್‌ನಲ್ಲಿ ಆದೇಶಿಸಿರುವಂತೆ, ವೃಷಭಾವತಿ ಕಣಿವೆಯ ಶ್ಯಾನಮಂಗಲ ಸೇತುವೆಯ ಅಕ್ಕಪಕ್ಕದಲ್ಲಿ ಶುದ್ಧೀಕರಣಗೊಳಿಸುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ರಾಜ್ಯ ಹೈಕೋರ್ಟ್‌ನ ನ್ಯಾಯಾಧೀಶರು, ಲೋಕ್ ಅದಾಲತ್‌ನಲ್ಲಿ ದಿನಾಂಕ:16/01/2008 ರಂದು ಆದೇಶ ಹೊರಡಿಸಿದ್ದು, ದಿನಾಂಕ:12/03/2008 ರ ಒಳಗೆ ವೃಷಭಾವತಿ ಕಣಿವೆಯಲ್ಲಿರುವ ಘನ ತ್ಯಾಜ್ಯ ವಸ್ತುಗಳು ಡೆಬ್ರಿಸ್ ಇತ್ಯಾದಿಗಳನ್ನು ತೆಗೆದು ನಾಲೆಯನ್ನು ಶುದ್ಧೀಕರಣಗೊಳಿಸುವಂತೆ ಸೂಚಿಸಿದ್ದರು. ಅದರಂತೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರು ದಿನಾಂಕ:28/02/2008 ರಂದು ಎಲ್ಲಾ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ ಸಭೆಯ ನಡವಳಿಗಳನ್ನು ಸೂಕ್ತ ಕ್ರಮಕ್ಕೆಗೊಳ್ಳಲು ಕಳುಹಿಸಿರುತ್ತಾರೆ.

ಸಭೆಯ ನಡವಳಿಯಲ್ಲಿ ಘನ ಸರ್ಕಾರವು ಬಿ.ಬಿ.ಎಂ.ಪಿ, ಬಿ.ಡಿ.ಎ. ಬಿ.ಡಬ್ಲ್ಯು.ಎಸ್.ಎಸ್.ಬಿ ಮತ್ತು ಕೆ.ಎಸ್.ಪಿ.ಸಿ.ಬಿ ರವರು ತಲಾ ಒಂದು ಕೋಟಿ ಹಣವನ್ನು ದಿನಾಂಕ:15/03/2008 ರೊಳಗೆ ಇಡುಗಂಟಾಗಿ ಇಟ್ಟು ಶ್ಯಾನಮಂಗಲ ಸೇತುವೆಯ ಅಕ್ಕಪಕ್ಕದಲ್ಲಿರುವ ತೇಲುವ ಘನತ್ಯಾಜ್ಯ ವಸ್ತುಗಳನ್ನು ತೆಗೆದು ವೃಷಭಾವತಿ ಕಣಿವೆಯನ್ನು ಶುದ್ಧೀಕರಣಗೊಳಿಸುವ ಕಾಮಗಾರಿಯನ್ನು ದಿನಾಂಕ:10/03/2008 ರೊಳಗೆ ಪ್ರಾರಂಭಿಸಬೇಕೆಂದು ಆದೇಶಿಸಿರುತ್ತಾರೆ.

ಲೋಕ್ ಅದಾಲತ್‌ನಲ್ಲಿ ಆದೇಶಿಸಿರುವಂತೆ, ವೃಷಭಾವತಿ ಕಣಿವೆಯಲ್ಲಿ ಸೇರಿರುವ ತೇಲುವ ವಸ್ತುಗಳನ್ನು ತೆಗೆದು ವ್ಯಾಲಿಯನ್ನು ಶುದ್ಧೀಕರಣಗೊಳಿಸುವ ಕುರಿತಾಗಿ 2007-08 ನೇ ಸಾಲಿನ ದರಸೂಚಿಯ ಆಧಾರದ ಮೇಲೆ ರೂ.306.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಈ ಕಾಮಗಾರಿಯನ್ನು ಅತ್ಯಂತ ಶೀಘ್ರವಾಗಿ ಕೈಗೊಂಡು ಮುಗಿಸಬೇಕಾಗಿರುವುದರಿಂದ ಸದರಿ ಕಾಮಗಾರಿಯನ್ನು ಎಸ್.ಆರ್ ದರಗಳ ಮೇಲೆ ನಿರ್ವಹಿಸುವುದಾಗಿ ಮೆ॥ ಪರಿಚಿತ ಕನ್‌ಸ್ಟ್ರಕ್ಷನ್ ರವರು ಪತ್ರ ನೀಡಿರುವುದರಿಂದಲೂ ಹಾಗೂ ಇವರ ಬಳಿ ಸದರಿ ಕಾಮಗಾರಿಯನ್ನು ನಿರ್ವಹಿಸಲು ಬೇಕಾಗಬಹುದಾದ ಎಲ್ಲಾ Earth Moving and Excavating Equipments ಗಳು ಇರುವುದರಿಂದಲೂ ಇವರ ಮನವಿಯನ್ನು ಪರಿಗಣಿಸಲಾಗಿದ್ದು, ಇವರಿಗೆ ರೂ.300.00 ಲಕ್ಷಗಳ ಕಾಮಗಾರಿಯನ್ನು ತುಂಡು ಗುತ್ತಿಗೆ ಆಧಾರದ ಮೇಲೆ ದರಸೂಚಿಯ ದರಗಳ ಮೇಲೆ ನಿರ್ವಹಿಸುವಂತೆ ಆದೇಶ ನೀಡಲಾಗಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭ ಮಾಡಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ವೃಷಭಾವತಿ ಕಣಿವೆಯ ಶ್ಯಾನಮಂಗಲ ಸೇತುವೆಯ ಅಕ್ಕಪಕ್ಕದಲ್ಲಿ ಶುದ್ಧೀಕರಣಗೊಳಿಸುವ ಬಗ್ಗೆ ರೂ.306.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ಸದರಿ ಕಾಮಗಾರಿಯನ್ನು ರೂ.300.00 ಲಕ್ಷಗಳಿಗೆ ಮೆ॥ ಪರಿಚಿತ ಕನ್‌ಸ್ಟ್ರಕ್ಷನ್‌ರವರಿಗೆ ತುಂಡು ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಕರ್ನಾಟಕ ಪಾರದರ್ಶಕ ನಿಯಮಾವಳಿಗಳ ಅಡಿಯಲ್ಲಿ ರಿಯಾಯಿತಿ ನೀಡುವಂತೆಯು ಹಾಗೂ ತುಂಡು ಗುತ್ತಿಗೆ ಆಧಾರದ ಮೇಲೆ ಕಾಮಗಾರಿಯನ್ನು ವಹಿಸಿರುವ ಪ್ರಕ್ರಿಯೆಗೆ ಘಟನೋತ್ತರ ಮಂಜೂರಾತಿಯನ್ನು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿ

**ತೀರ್ಮಾನ:** ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು

ವಿಷಯದ ಸಂಖ್ಯೆ:247/08-09

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ನಗರದ ಈಶಾನ್ಯ ಭಾಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಲ್ಲೆಯನ್ನು ವಿಸ್ತರಿಸುವ ಬಗ್ಗೆ.

ಪ್ರಸ್ತಾವನೆ:

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುಗಮ ಸಂಪರ್ಕ ಕಲ್ಪಿಸುವ ಹಾಗೂ [illegible] ನಿರ್ವಹಣೆಯನ್ನು ಮಾಡುವ ಬಗ್ಗೆ ದಿನಾಂಕ:08/03/2008 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ರವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಈ ಸಭೆಯಲ್ಲಿ ಕೇಂದ್ರ ಸರ್ಕಾರದ ನಾಗರೀಕ ವಿಮಾನ [illegible] ಯಾನ ನಿರ್ದೇಶಕರು ತೆಗೆದುಕೊಂಡ ತೀರ್ಮಾನದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಇಲ್ಲದೇ ಇರುವುದರಿಂದ ನಿರ್ವಹಣೆಯ ದೃಷ್ಟಿಯಿಂದ [illegible] ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ಎರಡೂ ಬದಿಯ ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ತರುವುದು ಸೂಕ್ತವೆಂದು ನಿರ್ದೇಶಿಸಲಾಗಿರುತ್ತದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಈಗಾಗಲೇ ಉದ್ಘಾಟನೆಯಾಗಿದ್ದು, ಈ ವಿಮಾನ ನಿಲ್ದಾಣಕ್ಕೆ ನಗರದಿಂದ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಒಂದೇ ಸಂಸ್ಥೆಯಿಂದ ಅಭಿವೃದ್ಧಿ ಹಾಗೂ ನಿರ್ವಹಣೆ ಮಾಡುವುದು ಸೂಕ್ತವಾಗಿರುತ್ತದೆ. ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲೆಯಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ರಸ್ತೆಯನ್ನು ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿಸುವುದು [illegible] ಅವಶ್ಯವಿರುತ್ತದೆ. ಈ ರಸ್ತೆಯ ಎರಡೂ ಬದಿಯಲ್ಲಿ Right of Way ಯಿಂದ 500 ಮೀ ಜಾಗವನ್ನು [illegible] ವಿಮಾನ ನಿಲ್ದಾಣ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿದ್ದಲ್ಲಿ [illegible] ತೆರಿಗೆಗಳಿಂದ ಬರುವ ಆದಾಯವನ್ನು ಸದರಿ ರಸ್ತೆಗಳ ನಿರ್ವಹಣೆಗೆ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿದ್ದಲ್ಲಿ "ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ" ಎಂದು ಕರೆಯಲು ಸೂಕ್ತವಾಗಿರುತ್ತದೆ.

ಈ ಸಂಪರ್ಕ ರಸ್ತೆಯು ಬೆಂಗಳೂರು ಉತ್ತರ ತಾಲ್ಲೂಕು, ಹುಣಸೆಮಾರನಹಳ್ಳಿ ಗ್ರಾಮ ಪಂಚಾಯಿತಿ [illegible] ದೇವನಹಳ್ಳಿ ತಾಲ್ಲೂಕು ಇವುಗಳಿಗೆ ಸೇರಿರುತ್ತದೆ ಹಾಗೂ ಈ ರಸ್ತೆಯು ಸುಮಾರು 15.00 [illegible] ಉದ್ದವಿರುತ್ತದೆ. ಈಗಾಗಲೇ ಘನ ಸರ್ಕಾರವು ಸದರಿ ರಸ್ತೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವ ಜವಾಬ್ದಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವಹಿಸಿರುತ್ತದೆ ಹಾಗೂ ಅದರಂತೆ ಕ್ರಮ ಕೈಗೊಳ್ಳಲಾಗಿದೆ. [illegible] ಮಾಡುವುದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬೀದಿ ದೀಪಗಳ ನಿರ್ವಹಣೆ [illegible] ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲೆಕ್ಟ್ರಿಕಲ್ ವಿಭಾಗದಿಂದ [illegible] ಟೆಂಡರ್ ಅಹ್ವಾನಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

>> 2 <<

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈಗಿರುವ ವ್ಯಾಪ್ತಿಯಿಂದ (ಬ್ಯಾಟರಾಯನಪುರ ವಲಯದಿಂದ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಇರುವ ರಸ್ತೆ ಹಾಗೂ Right of Way ಯಿಂದ ಎರಡು ಕಡೆ 500 ಮೀ ಅಗಲದ ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಳ್ಳುವ ಬಗ್ಗೆ.
2. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿಸಿಕೊಳ್ಳುವ ಬಗ್ಗೆ, ಹಾಗೂ
3. ಸದರಿ ಪ್ರದೇಶವನ್ನು ಬೆಂಗಳೂರು ಉತ್ತರ ತಾಲ್ಲೂಕು, ಹುಣಸೆಮಾರನಹಳ್ಳಿ ಗ್ರಾಮ ಪಂಚಾಯಿತಿ, ದೇವನಹಳ್ಳಿ ತಾಲ್ಲೂಕು ಇವುಗಳಿಂದ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವ ಬಗ್ಗೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಹಾಗೂ ಸದರಿ ಪ್ರಸ್ತಾವನೆಯನ್ನು ಘನ ಸರ್ಕಾರದ ಅನುಮೋದನೆ ಪಡೆಯುವಸಲುವಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:12/06/2008 ರ ಟಿಪ್ಪಣಿಯನ್ನು ಒಪ್ಪಿದೆ

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು

ವಿಷಯದ ಸಂಖ್ಯೆ:248/08-09

Central Silk Board ಬಳಿ ಬಿ.ಟಿ.ಎಮ್ ಬಡಾವಣೆಯಲ್ಲಿ 29ನೇ ಅಡ್ಡ ರಸ್ತೆಯಿಂದ ಹೊಸೂರು ರಸ್ತೆಯವರೆಗೆ ಮಡಿವಾಳ ಕೆರೆ ಏರಿಯ ಮೇಲೆ ರಸ್ತೆ ನಿರ್ಮಿಸುವ ಬಗ್ಗೆ.

ಪ್ರಸ್ತಾವನೆ:

ಹೊಸೂರು ರಸ್ತೆ ಹಾಗೂ ಹೊರವರ್ತುಲ ರಸ್ತೆ ಕೂಡುವ ವೃತ್ತದಲ್ಲಿ (Silk Board junction) ವಾಹನ ಸಂಚಾರ ಅತಿ ಹೆಚ್ಚಿನದಾಗಿದ್ದು ವಾಹನಗಳು ವೃತ್ತವನ್ನು ದಾಟಿ ಹೋಗುವಾಗ ಹೆಚ್ಚು ಸಮಯ ತೆಗೆದುಕೊಳ್ಳುತ್ತಿರುತ್ತದೆ. ಎರಡೂ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿರುವುದರಿಂದ ಈ ವೃತ್ತವನ್ನು ದಾಟಿ ಹೋಗುವಾಗ Que distance ಹೆಚ್ಚಾಗಿದ್ದು, ಇದರಿಂದ ಅಧಿಕ ವ್ಯಯ ಹಾಗೂ ಸಮಯದ ವ್ಯಯ ಕಂಡುಬಂದಿರುತ್ತದೆ. ಹೊಸೂರು ರಸ್ತೆ ಹಾಗೂ ಮಡಿವಾಳ ಬಿ.ಟಿ.ಎಮ್ ಲೇಔಟ್ ಸಂಪರ್ಕಿಸುವ ರಸ್ತೆ ಕಲ್ಪಿಸುವುದರ ಅವಶ್ಯಕತೆ ಕಂಡುಬಂದಿರುತ್ತದೆ. ಈ ವ್ಯವಸ್ಥೆಯಿಂದಾಗಿ ವಾಹನಗಳು ಹೊಸೂರು ರಸ್ತೆಯಿಂದ ಬಿ.ಟಿ.ಎಮ್ ಕಡೆಗೆ ಹಾಗೂ ಬಿ.ಟಿ.ಎಮ್ ನಿಂದ ಹೊಸೂರು ಕಡೆಗೆ Central Silk Board ಗೆ ಹೋಗದೆ ಸಂಚಾರ ಕಲ್ಪಿಸಬಹುದಾಗಿರುತ್ತದೆ. ಇದರಿಂದಾಗಿ ಜನಸಾಮಾನ್ಯರಿಗೆ ಹೆಚ್ಚು ಅನುಕೂಲವಾಗುತ್ತದೆ ಹಾಗೂ ಕಡಿಮೆ ವೇಳೆಯಲ್ಲಿ ಸಂಚಾರ ಮಾಡಬಹುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಡಿವಾಳ ಕೆರೆಯ ಏರಿಯ ಉದ್ದಕ್ಕೂ ಸರ್ವೆ ಮಾಡಿ ಈ ರಸ್ತೆಯನ್ನು ನಿರ್ಮಿಸಲು ಕೈಗೆತ್ತಿಕೊಳ್ಳಬೇಕಾದ Feasibility Study, GAD ಸಿದ್ಧಪಡಿಸಲು, ಅಂದಾಜುಪಟ್ಟಿ ಸಿದ್ಧಪಡಿಸಲು ಸಲಹೆಗಾರರನ್ನು ನೇಮಿಸಬಹುದಾಗಿರುತ್ತದೆ. ಈಗಾಗಲೇ ಪಾಲಿಕೆಯಲ್ಲಿ ಅನೇಕ ಯೋಜನೆಗಳಿಗೆ ಸಲಹೆಗಾರರಾಗಿ ಕೆಲಸ ನಿರ್ವಹಿಸುತ್ತಿರುವ M/s Manansa Consultants ರವರಿಗೆ ವಹಿಸಲಾಗಿರುತ್ತದೆ. M/s Manansa Consultants ರವರು ಈಗಾಗಲೇ Inspection Report ಸಿದ್ಧಪಡಿಸಿ ಪಾಲಿಕೆಗೆ ಮಂಡಿಸಿರುತ್ತಾರೆ. ಹಾಗೂ ಈ ಕಾಮಗಾರಿಗೆ ರೂ.4.40 ಲಕ್ಷ ಮೊತ್ತವನ್ನು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ Central Silk Board ಬಳಿ ಹೊಸೂರು ರಸ್ತೆಯಿಂದ ಬಿ.ಟಿ.ಎಮ್ ಬಡಾವಣೆಗೆ ಮಡಿವಾಳ ಏರಿಯ ಮೇಲೆ ಉದ್ದೇಶಿತ ರಸ್ತೆ ನಿರ್ಮಾಣಕ್ಕಾಗಿ Feasibility Study, GAD ಸಿದ್ಧಪಡಿಸುವಿಕೆ, ಅಂದಾಜುಪಟ್ಟಿ ಹಾಗೂ ಇತರೆ ನಕ್ಷೆಗಳನ್ನು ಸಿದ್ಧಪಡಿಸಲು KTTP ಕಾಯ್ದೆ clause 28 E ಅಡಿಯಲ್ಲಿ M/s Manasa Consultants ರವರನ್ನು ನೇಮಿಸುವ ಬಗ್ಗೆ. ಸದರಿ ಕೆಲಸಕ್ಕಾಗಿ M/s Manasa Consultants ರವರು ನಮೂದಿಸಿರುವ ರೂ.4.40 ಲಕ್ಷಗಳಿಗೆ ಅನುಮೋದನೆ ಹಾಗೂ ಈಗಾಗಲೇ M/s Manasa Consultants ರವರನ್ನು ಸಲಹೆಗಾರರನ್ನಾಗಿ ನೇಮಿಸಿ ಕೊಂಡಿರುವ ಕ್ರಮಕ್ಕೆ ಸ್ಥಿರೀಕರಣ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿ..

ತೀರ್ಮಾನ: ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು